ಶೂನ್ಯವಾಗಿಬಿಡುತ್ತವೆ. ನನಗೇನೂ ಸಾಯುವಂತಹ ವಯಸ್ಸೂ ಅಲ್ಲ. ಹಾಗಾದರೆ ಸಾಯುವ ವಯಸ್ಸು ಎಂದರೆ ಯಾವುದು? ಸಾಮಾನ್ಯಾರ್ಥದಲ್ಲಿ, ಯೌವನ ಕಳೆದು ಮುಪ್ಪಿನ ದಿನಗಳನ್ನು ಬಹುಕಾಲ ಅನುಭವಿಸಿದ ನಂತರ ಈ ಸಾಯುವ ವಯಸ್ಸು ಎಂಬುದು ಬರುವುದಂತೆ. ಇದು ಮನುಷ್ಯನ ಲೆಕ್ಕಾಚಾರದಲ್ಲಿ ಸರಿ ಇದ್ದೀತು. ಆದರೆ ವಾಸ್ತವ ಹಾಗಿಲ್ಲವಲ್ಲ. ಸತ್ಯಸ್ಥಿತಿಗೆ ಅನಂತ ಮುಖಗಳಿವೆ– ಎನ್ನಿಸಿತು. ಸತ್ಯವನ್ನು ಗ್ರಹಿಸುವ ನಮ್ಮ ಮಿದುಳಿನ ಅಸಾಮರ್ಥ್ಯದಿಂದ ನಾವು ಸಾವಿನ ಈ ಭಯಂಕರ ಮುಖವನ್ನು ಅರ್ಥಮಾಡಿಕೊಳ್ಳಲಾರೆವೇನೋ. ಆದರೆ ಡಾ|| ಸಿಂಗ್ ಹೇಳಿದ ಭವಿಷ್ಯವಾಣಿ? ಅವರು ವೈದ್ಯಕೀಯ ಕಣ್ಣುಗಳಿಂದ ಗ್ರಹಿಸಿದ ಸತ್ಯವನ್ನು ನನ್ನೆದುರು ಹೇಳಿದ್ದಾರೆ. ಸಾಮಾನ್ಯ ಮನುಷ್ಯನಿಗಿಂತ ಸಿಂಗ್ ಅವರು ಈ ವೈದ್ಯಕೀಯ ದೃಷ್ಟಿಯಲ್ಲಿ ಪೂರಾ ವಿಭಿನ್ನರು. ಗಣೇಶಯ್ಯನೇ ಈ ಮಾತನ್ನು ನನಗೆ ಹೇಳಿದ್ದರೆ, ನಾನು ಪರಿಹಾಸ್ಯ ಮಾಡುತ್ತಿದ್ದೆ– ಎಂಬುದು ನನಗೆ ಸ್ಪಷ್ಟವಾಗಿತ್ತು. ಹಾಗಾದರೆ ಸಿಂಗ್ ಹೇಳಿದ ಸತ್ಯ ಸಂಭವನೀಯವೆ? ವೈದ್ಯಕೀಯ ದೃಷ್ಟಿಯು ಅವರಲ್ಲಿ ಹೇಗೆ ಬೆಳೆಯಿತು? ಆ ವಿಭಾಗದಲ್ಲಿ ಅವರು ಕ್ರಮಶಃ ಅಧ್ಯಯನವನ್ನು ಪೂರೈಸಿದ್ದಾರೆ, ಜೊತೆಗೆ ಅನುಭವ ಬೇರೆ... ಆದರೆ ಈ ಅಧ್ಯಯನಕ್ಕೆ ಆಧಾರ ಯಾವುದು? ಅದೇ, ಹಿಂದಿನ ವಿಜ್ಞಾನಿಗಳ ಚಿಂತನೆಯಿಂದ ಒಡಮೂಡಿ ಬಂದ ಗ್ರಂಥರಾಶಿ. ಅಂತೂ ಅದೂ ಮಾನವ ನಿರ್ಮಿತವೇ ಎಂದಾಯ್ತಲ್ಲ. ಸತ್ಯದ ಮಹತ್ತು ಬೃಹತ್ತುಗಳ ಮುಂದೆ ಈ ವಿಜ್ಞಾನಿಗಳ ದೃಷ್ಟಿ ತೀರಾ ಅಲ್ಪ, ಕ್ಷುಲ್ಲಕವಾದ ತಮ್ಮ ಅವಲೋಕನ ಶಕ್ತಿಯಿಂದ ಕಂಡ ಸತ್ಯದ ಸ್ವರೂಪ ನಿರ್ದುಷ್ಟ ಹಾಗೂ ನಿರ್ದಿಷ್ಟ ಎಂಬ ಬಗ್ಗೆ ಖಾತ್ರಿ ಏನು? ಅಂದರೆ ಸಾವಿನಂತಹ ಮಾನವಾತೀತ ವಿಷಯದ ಬಗ್ಗೆ ಮಾನವ ತನ್ನ ಎಂಥದೇ ವಿಶೇಷ ದೃಷ್ಟಿಯಿಂದಲಾದರೂ ನಿರ್ಣಯ ನೀಡಬಲ್ಲನೇ? ಸಿಂಗ್ ಅವರೂ ನನ್ನಂತೆಯೇ ಮರಣಾಧೀನ ವ್ಯಕ್ತಿ. ಇಂತಹವರೊಬ್ಬರು ಅವರಂತೆ ಮರಣಾಧೀನನಾದ ನನ್ನ ಮರಣದ ಬಗ್ಗೆ ನುಡಿದಿರುವ ಭವಿಷ್ಯ ನಿಜವಾದೀತೆ? ಅವರನ್ನು ನಾನು ಎಲ್ಲಿಯವರೆಗೆ ನಂಬಬಹುದು? ಹುಟ್ಟು ಸಾವಿನ ಹತೋಟಿಯ ಕೀಲಿಕೈ ಯಾವ ಮಾನವನ ಕೈಯಲ್ಲೂ ಇಲ್ಲ. ಹಾಗಾದರೆ ಡಾ|| ಸಿಂಗ್ ಅವರು ಈ ಮಾತನ್ನು ನಾನಾದರೂ ಏಕೆ ನಂಬಬೇಕು? ನನ್ನ ಈ ಶರೀರ ಸ್ಥಿತಿಯನ್ನು ನಾನೇ ನೋಡಿಕೊಂಡರೆ, ಈ ಭವಿಷ್ಯವಾಣಿಯಲ್ಲಿ ನಂಬುಗೆಯೇ ಉಂಟಾಗುತ್ತಿಲ್ಲ. ಉಹುಂ... ನಾನು ಸಿಂಗ್ ಅವರ ಈ ಸೂಚನೆಯನ್ನು ಪೂರ್ಣವಾಗಿ ಅಲಕ್ಷಿಸುತ್ತೇನೆ. ನಾನಂತೂ ನೂರು ವರ್ಷಗಳ ಪರ್ಯಂತ ಬದುಕಬೇಕೆಂಬ ಸಂಕಲ್ಪ ಉಳ್ಳವನು. ಈ ಸಿಂಗ್ ಅವರ ಹೇಳಿಕೆಯಂತೆ, ಇನ್ನೆರಡೇ ತಿಂಗಳಲ್ಲಿ ನನ್ನ ಕೊನೆ ಎಂಬುದು ಅಸಂಭವ!

ಬಸ್ ವೇಗವಾಗಿ ಸಾಗುತ್ತಿತ್ತು. ಡಾ|| ಸಿಂಗ್ ಅವರ ಭವಿಷ್ಯವಾಣಿಯನ್ನು ನಾನು ಅಲಕ್ಷಿಸಿದುದರಿಂದ ಎಂಥದೋ ಆತ್ಮವಿಶ್ವಾಸ ಮೂಡಿದ ಅನುಭವವಾಗತೊಡಗಿತು. ಎದೆಯನ್ನು ಸೆಟೆಸಿ ನಿಂತು. ಒಮ್ಮೆ ದೀರ್ಘಶ್ವಾಸವನ್ನೆಳೆದೆ. ಬಸ್ಸಿನ ತುಂಬ ಜನಗಳೇ ಇದ್ದುದರಿಂದ ಬೀಡಿಯ, ನಶ್ಯದ, ಬೆವರಿನ, ಹೆಂಡದ ಮಿಶ್ರವಾಸನೆಯು ನನ್ನ ಮೂಗಿಗೆ ಬಡಿದು ನಾಲ್ಕೈದು ಸೆಕೆಂಡುಗಳ ಕಾಲ ವಿಚಿತ್ರ ಸಂಕಟವಾಗತೊಡಗಿತು. ಗಣೇಶಯ್ಯ ಏನು ಮಾಡುತ್ತಿದ್ದಾನೋ ನೋಡಬೇಕೆಂದು ಅಕ್ಕಪಕ್ಕ ಬಗ್ಗಿ ಬಗ್ಗಿ ನೋಡಿದರೂ, ದಟ್ಟ ಜನ ಸಂದಣಿಯಲ್ಲಿ ಅವನು ಕಾಣಿಸಲಿಲ್ಲ. ಅವನಿಗಂತೂ ಡಾ|| ಸಿಂಗ್ ಅವರು ತುಂಬ ಉತ್ತೇಜಕ ಉತ್ತರವನ್ನು ಕೊಟ್ಟಿದ್ದಾರೆ. ಒಂದು ಟಾನಿಕ್ ಹದಿನೈದು ದಿನ ಸೇವಿಸಿದರಾಯಿತು. ಅವನ ಆರೋಗ್ಯ ಪೂರ್ಣ ಸುಧಾರಿಸಿಬಿಡುವುದಂತೆ... ನನ್ನ ಬಗ್ಗೆ ಸಿಂಗ್ ಹೇಳಿದ ಭವಿಷ್ಯಕ್ಕೆ ಅವರಿಗೆ ಯಾವ ಶಾಸ್ತ್ರ